**ಕುಮಟಾ - ಹೊನ್ನಾವರ ಜಂಟಿ ನೀರು ಸರಬರಾಜು ಯೋಜನೆ**

500 - ಡಾ|| ಎಂ. ಪಿ.ಕರ್ಕಿ (ಕುಮುಟಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಮುಟಾ ಹೊನ್ನಾವರ ಜಂಟೀ ನೀರಿನ ಯೋಜನೆ ಯಾವ ಹಂತದಲ್ಲಿದೆ.*

ಆ) *ಪ್ರಾಮುಖ್ಯವಾದ ರೈಸಿಂಗಮೈನ್ ಟ್ಯಾಂಕ್ ಕಟ್ಟುವುದು ಮುಂತಾದ ಕೆಲಸಗಳಿಗೆ ಇನ್ನು ಟೆಂಡರ್ ಕರೆದಿಲ್ಲರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ಯೋಜನೆಯನ್ನು ಶೀಘ್ರ ಮುಗಿಸಲು ಕ್ರಮ ಕೈಗೊಳ್ಳಲಾಗುವುದೇ?*

ಈ) *ಈ ನಿಟ್ಟಿನಲ್ಲಿ ಸರ್ಕಾರದ ಪ್ರಯತ್ನಗಳಾವುವು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಈ ಯೋಜನೆಯ ಮೂಲ ಸ್ಥಾವರ ಕಾಮಗಾರಿ ಅಂದರೆ ಜಾಕವೆಲ್ ಮತ್ತು ಪಂಪು ಮನೆ ನಿರ್ಮಾಣ ಮಾಡುವ ಕೆಲಸ ಜಾಕವೆಲ್ ಮತ್ತ ಪಂಪು ಮನೆ ನಿರ್ಮಾಣ ಮಾಡುವ ಕೆಲಸ, ಜಾಕವೆಲನಿಂದ ಶುದ್ಧೀಕರಣಾಗಾರಕ್ಕೆ ಮತ್ತು ಜಲಶುದ್ಧೀಕರಣಗಾರದಿಂದ ಕುಮುಟಾ ಪಟ್ಟಣಕ್ಕೆ 16.50 ಕಿ.ಮೀ.500ಮಿ.ಮಿ. ವ್ಯಾಸದ ಪಿಎಸಸಿ ಪೈಪ್ ಮಾರ್ಗದ ಕೆಲಸ ಮತ್ತು375ಮಿ.ಮಿ. ಪೈಪ್ ಹೊನ್ನಾವರದ ಪಟ್ಟಣಕ್ಕೆ ಮೇಲಿನ ಕೊಳವೆ ಮಾರ್ಗದಿಂದ ನೀರನ್ನು ಹಾಯಿಸುವ ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು ಕೆಲಸಗಳು ಪ್ರಗತಿಯಲ್ಲಿವೆ.

ಆ) ರೈಸಿಂಗಮೈನ್ ಕಾಮಗಾರಿಗೆ ಗುತ್ತಿಗೆದಾರರನ್ನು ಇತ್ತೀಚೆಗೆ ನೇಮಿಸಲಾಗಿದೆ. ಹೊನ್ನಾವರದಲ್ಲಿ ನಿರ್ಮಿಸಬೇಕಾಗಿರುವ ಎರಡು ಮೇಲಮಟ್ಟದ ಜಲ ಸಂಗ್ರಾಹಾಗಾರಗಳಿಗೆ ಗುತ್ತಿಗೆದಾರರನ್ನು ನೇಮಿಸಬೇಕಾಗಿದೆ.

ಇ) ಕ್ರಮ ತೆಗೆದುಕೊಳ್ಳಲಾಗುವುದು.

ಈ) ಈ ನಿಟ್ಟಿನಲ್ಲಿ ಉಳಿದ ಕೆಲಸಗಳಿಗೆ ಗುತ್ತಿಗೆದಾರರನ್ನು ಗೊತ್ತುಪಡಿಸುವಲ್ಲಿ ಶೀಘ್ರದಲ್ಲಿ ಕ್ರಮಕೈಗೊಳ್ಳಲಾಗುವುದು. ಕುಮುಟಾ-ಹೊನ್ನಾವರ 200 ಟ ನೀರು ಸರಬರಾಜು ಯೋಜನೆಯನ್ನು 1996 ಡಿಸೆಂಬರ್ ಅಂತ್ಯಕ್ಕೆ ಚಾಲು ಮಾಡಲು ಉದ್ದೇಶಿಸಲಾಗಿದೆ.

**ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರು ಸರಬರಾಜು**

501 - ಶ್ರೀ ಎಂ.ಎಸ್. ಕರ್ಜಗಿ (ರಾಣೆಬೆನ್ನೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸಲು ಅಂತರ್ಜಲ ಮಂಡಳಿಯಿಂದ ಕುದ್ರಿಹಾಳ ಕುಡಿಯುವ ನೀರಿನ ಯೋಜನೆಗೆ ಜನರೇಟರ್ ಅಳವಡಿಸುವ ವಿಷಯ ಯಾವ ಹಂತದಲ್ಲಿದೆ?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) ;

ಅ) ರಾಣೆಬೆನ್ನೂರು ನಗರದ ಕುದ್ರಿಹಾಳನಲ್ಲಿರುವ ಪಂಪು ಸೆಟ್ಟುಗಳಿಗೆ 28.5 ಕೆ.ವಿ.ಎ. ಜನರೇಟರ್ ಮತ್ತು ಇತರೆ ಸಲಕರಣೆಗಳ ಕಾಮಗಾರಿ ಕೆಲಸಕ್ಕೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ತುಂಬಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು 7.3.96 ರಂದು ಕೊನೆ ದಿವಸವನ್ನಾಗಿ ನಿಗಧಿಪಡಿಸಲಾಗಿದೆ. ಮೇಲ್ಕಂಡ ಕಾಮಗಾರಿಯನ್ನು 1996 ಮಾರ್ಚ ತಿಂಗಳ ಕೊನೆಯೊಳಗೆ ಮುಗಿಸಲುಯೋಜಿಸಲಾಗಿದೆ.

**ಸರ್ಕಾರದ ಸ್ವಾಮ್ಯದಲ್ಲಿರುವ ವಿಕ್ರಾಂತ್ ಟೈರ್ಸ್ ಕಂಪನಿಯ ಮಾರಾಟ**

502 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸರ್ಕಾರ ತನ್ನ ಸ್ವಾಮ್ಯದಲ್ಲಿರುವ ವಿಕ್ರಾಂತ್ ಟಯರ್ಸ್ ಕಂಪನಿಯನ್ನು ಮಾರಾಟ ಮಾಡಲು ನಿಶ್ಚಯಿಸಿದೆಯೇ? ಇದುವರೆವಿಗೂ ಯಾವ ಯಾವ ಕಂಪನಿಗಳು ಮುಂದೆ ಬಂದಿವೆ?*

*ಆ) ಪ್ರಸ್ತುತ ಈ ಕಂಪನಿಯಲ್ಲಿರುವವುಗಳು ಯಾವುವು ಎಷ್ಟು ಇವೆ?*

*ಇ) ಕಂಪನಿಯು ಕಳೆದ 5 ವರ್ಷಗಳಲ್ಲಿ ಯಾವ ಯಾವ ವರ್ಷ ಎಷ್ಟು ಎಷ್ಟು ಲಾಭ ಮಾಡಿದೆ ಹಾಗೂ ಯಾವ ಯಾವ ವರ್ಷ ಎಷ್ಟು ಎಷ್ಟು ನಷ್ಟ ಅನುಭವಿಸಿದೆ?*

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) 1992ರ ನಂತರ ಸರ್ಕಾರದ ಸ್ವಾಮ್ಯದ ಕಂಪನಿ ಮತ್ತು ನಿಗಮಗಳ ಷೇರು ಬಂಡವಾಳ ವಿಕ್ರಾಂತ್ ಟಯರ್ಸ್ ನಿಯಮಿತದಲ್ಲಿ ಶೇ. 51ಕ್ಕಿಂತ ಕಡಿಮೆಯಾಗಿದೆ. ತತ್ಪರಿಣಾಮವಾಗಿ ವಿಕ್ರಾಂತ್ ಟಯರ್ಸ್ ನಿಯಮಿತವು ಸರ್ಕಾರದ ಕಂಪನಿಯಾಗಿರುವುದಿಲ್ಲ. ಈಗ ಕರ್ನಾಟಕ ಸರ್ಕಾರವು ತಾಂತ್ರಿಕ ಸಹಭಾಗಿತ್ವಕ್ಕೆ ಹೊಸದಾಗಿ ಬಂಡವಾಳ ಹೂಡುವ ಹಾಗೂ ಇತ್ತೀಚಿನ ತಾಂತ್ರಿಕತೆಯನ್ನು ಅಳವಡಿಸಲು ಪಾಲುದಾರರನ್ನು ತರಲು ಯೋಜಿಸಿದೆ. ಈ ಉದ್ದೇಶಕ್ಕಾಗಿ ಸರ್ಕಾರವು ಕೆ.ಎಸ್.ಐ.ಡಿ.ಸಿ ಯನ್ನು ನೋಡಲ್ ಎಜನ್ಸಿಯಾಗಿ ನೇಮಿಸಿದೆ. ಕೆ.ಎನ್.ಐ.ಡಿ.ಸಿ.ಯು ಬಂಡವಾಳ ಹಿಂತೆಗೆದುಕೊಳ್ಳುವುದೆಂಬಂತೆ ಅರ್ಥೈಸುತ್ತದೆ.

ಆ) ಇಲ್ಲ.

ಇ) ಕಳೆದ 5 ವರ್ಷಗಳಲ್ಲಿ ಕಂಪನಿಯು ಗಳಿಸಿದ ಲಾಭ : ನಷ್ಟ ಈ ಕೆಳಗಿನಂತಿದೆ.

| ಲಾಭ | | ನಷ್ಟ (ಕೋಟಿ ರೂ.ಗಳಲ್ಲಿ) | |
|---|---|---|---|
| 1990-91 | 7.33 | 1992-93 | 6.37 |
| 1991-92 | 12.77 | 1993-94 | 3.60 |
| | | 1994-95 | 9.21 |